ಸ್ಥಿತಿಗಾಗಿ ಒಳಗೊಳಗೇ ನಗುತ್ತ, ಅಡುಗೆಮನೆಗೆ ಹೋಗಿ ಚಹಾ ಮಾಡಿಕೊಂಡು ಬಂದೆ. ಅವಳು ನಮ್ಮ ಮನೆಯ ಎಲ್ಲ ಮೂಲೆಗಳನ್ನೂ ಕಣ್ಣುಗಳಲ್ಲೇ ಅಳೆಯುತ್ತಿದ್ದಳು. ''ಚಹಾ'' ಎಂದು ಕೂಗಿ ಅವಳ ಮುಂದೆ ಕಪ್ ಹಿಡಿದೆ.

''ಹೂಂ, ಹೇಳು'' ಎಂದು ಮತ್ತೆ ನನ್ನ ಕುರ್ಚಿಯಲ್ಲಿ ಸರಿಯಾಗಿ ಕುಳಿತೆ. ಇನ್ನು ನಿನ್ನ ಸರದಿ ಎನ್ನುವಂತೆ.

''ಅಕ್ಕಾ, ನನ್ನ ಹಿಸ್ಟರಿ ಎಲ್ಲ ನಿನಗ ಗೊತ್ತಿರಭೌದು. ನಾನು, ನನ್ನಪ್ಪ ಇಬ್ರ ಇರ್ತೇವಿ ಮನಿಯೊಳಗ. ನನ್ನ ಕಮಾಯಿಯಿಂದನs ಮನಿ ನಡೀಬೇಕು. ಅವ್ವ ಸತ್ತು ರಗಡ ವರ್ಷಾದು. ಅಪ್ಪ ನನ್ನೂ ಇದ ದಂಧೆಕ್ಕ ಹಚ್ಚಿದಾ. ಇಪ್ಪತ್ತೈದ ವರ್ಷಾತು ಈ ಕೆಲಸಕ್ಕ ಇಳದು. ನಾನೂ ಪಿ.ಯು.ಸಿ. ತನಕಾ ಕಲತಿದ್ದೆ. ಆದರ ಮುಂದ ಕಲೀಲಿಕ್ಕೆ ಆಗಲಿಲ್ಲ. ಬಿಟ್ಟಬಿಟ್ಟೆ. ಅವ್ವಾಗೂ ಕೆಟ್ಟ ಬ್ಯಾನಿ ಹತ್ತಿತ್ತು; ಔಷಧ ಪಾಣಿ ಮಾಡ್ಲಿಕ್ಕೂ ರೊಕ್ಕ ಇರಲಿಲ್ಲ. ಅವ್ವ ಬಿಟ್ಟ ಕೆಲಸಾ ನಾ ಸುರು ಮಾಡಿದೆ. ಆದರ, ಅಕಿ ಹಂಗ ಬ್ಯಾನಿ ಗೀನಿ ಹಚಗೊಳ್ಳೊ ಅಷ್ಟ ಧಡ್ಡ ಇಲ್ಲ ನಾ. ಎಲ್ಲಾ ಪ್ರಿಕಾಶನ್ ತೊಗೊಂಡು ದಂಧೆ ಮಾಡತೇನಿ. ಗಿರಾಕಿನೂ ಮದ್ಲಿನ ಹಂಗ ಜಿಕ್ಕೂ ಅಲ್ಲ. ರೊಕ್ಕ ಇದ್ದಾವು ಕೈತುಂಬ ಕೊಡ್ತಾರ. ಇಲ್ದೇ ಇದ್ದಾವ್ರ ಹತ್ರ ನಾನ ಜಾಸ್ತ ಇಸಗೋಳುದಿಲ್ಲ. ಆದ್ರ ಈ ವಿಷಯದಾಗ ಗಂಡಸ್ರು ಭಾಳ ಉದಾರ ಇರ್ತಾರ. ಬ್ಯಾಡ ಬ್ಯಾಡ ಅಂದ್ರೂ ಕೈಯಾಗ ನೋಟ ತುರುಕಿ ಹೋಕ್ತಾರ'' ಅಂದು ನಗುತ್ತ ನನ್ನ ಮುಖಾ ನೋಡಿದಳು.

''ಅಕ್ಕಾ, ಬ್ಯಾಸರಾತು?''

''ಇಲ್ಲ ಹೇಳು.''

''ಹಿಂಗ ಇಲ್ಲಿತನಕಾ ಈ ಕೆಲಸದಾಗ ಭಾಳ ಇಲ್ಲಂದ್ರೂ ಸ್ವಲ್ಪ ದುಡದೇನಿ ಅಕ್ಕಾ. ನಮ್ಮಂಥಾವ್ರು ಎಷ್ಟು ಎಚ್ಚರದ್ಲೆ ಇದ್ರೂ ಯಾವಾಗ ಏನು ಬ್ಯಾನಿ ಬರ್ತದೋ ಹೇಳ್ಲಿಕ್ಕೆ ಬರಂಗಿಲ್ಲ. ಯಾವಾಗ ಸಾಯ್ತೇನಿ ಯಾರಿಗ್ಗೊತ್ತು! ಅದಕ್ಕ ನಾ ದುಡದದ್ದರಾಗ ಒಂದಿಷ್ಟ ರೊಕ್ಕಾ ಹೆಣ್ಣಮಕ್ಕಳ ಶಿಕ್ಷಣಕ್ಕ

